**ಜಾನಕಮ್ಮನವರ ಬಗ್ಗೆ ನೀವು ಬರೆದಿದ್ದೀರಿ. ಮಹಿಳೆ ಕುರಿತಾಗಿ ಚರಿತ್ರೆಯಲ್ಲಿ ಕಂಡು ಬರುವ ಮೌನ ಈ ಕಾಲದಲ್ಲಿಯೂ ಹಲವು ನೆಲೆಗಳಲ್ಲಿ ಸ್ಥಾಯಿಯಾಗಿದೆಯೆ? ಈಗಲೂ ಮಹಿಳೆ, ದ್ವಿತೀಯ ದರ್ಜೆಯ ಪ್ರಜೆಯಾಗಿ ಮುಂದುವರೆದಿದ್ದಾಳೆ ಅನಿಸುತ್ತದೆಯೆ?**

1988ರಲ್ಲಿ ನಾನು ಲೇಖಕಿಯರ ಸಂಘದ ಕಾರ್ಯದರ್ಶಿಯಾಗಿದ್ದ ಹೊತ್ತು, ಹೇಮಲತಾ ಮಹಿಷಿಯವರು ಅಧ್ಯಕ್ಷರಾಗಿದ್ದರು. ಆಗ ಪ್ರತಿ ಸಾಹಿತ್ಯಕ ವೇದಿಕೆಯಲ್ಲಿ ಬರೀ ಪುರುಷರೇ ಕುಳಿತಿರುತ್ತಿದ್ದುದನ್ನು ಕಾಣುತ್ತಿದ್ದೆವು. ಪುರುಷರ ಕೃತಿಗಳನ್ನು ಚರ್ಚಿಸಿ, ವಿಮರ್ಶಿಸಿ, ಕಾರ್ಯಕ್ರಮ ಮುಗಿಯುತ್ತಿತ್ತು. ನಾವು ಅನೇಕ ಬಾರಿ 'ಅದೇಕೆ ಸಾರ್ ನಿಮಗೆ ಒಬ್ಬರೇ ಒಬ್ಬ ಮಹಿಳೆಯ ಕೃತಿಯೂ ಗೋಚರಿಸಲಿಲ್ಲವೆ?' ಎಂದು ಕೇಳಿದರೆ, 'ಯಾರ್ರೀ ಬರೆದಿದ್ದಾರೆ' ಎಂದು ನಮಗೇ ಪ್ರಶ್ನೆ ಹಾಕುತ್ತಿದ್ದರು.

ಹೀಗಾಗಿ, ಇತಿಹಾಸದ ಮರೆತುಹೋದ ಪುಟಗಳಿಂದ ಕನ್ನಡದ ಮಹಿಳಾ ಪರಂಪರೆಯನ್ನು ಪುನರ್ ಸೃಷ್ಟಿಸುವುದು ಲೇಖಕಿಯರಾಗಿ ನಮ್ಮೆದುರಿದ್ದ ಮೊದಲ ಸವಾಲಾಗಿತ್ತು. ಅದರ ಮೊದಲ ಪ್ರಯತ್ನವಾಗಿ, ಎರಡನೇ ತರಗತಿಗೇ ಶಾಲೆ ತೊರೆಯಬೇಕಾದ ಪರಿಸರದಲ್ಲೂ ಸ್ವಾತಂತ್ರ್ಯ ಪೂರ್ವದ ವರ್ಷಗಳಲ್ಲಿ ಕವಿತೆ ಕಟ್ಟಿದ ಬೆಳಗೆರೆ ಜಾನಕಮ್ಮನವರ ಕವನಗಳ ಬೆನ್ನತ್ತಿ ಚಿತ್ರದುರ್ಗಕ್ಕೆ ತೆರಳಿದ್ದೆ. 'ಗಿಡವೆಂದು ಬಗೆದೆಯೋ ಹೆಣ್ಣು ಜನ್ಮದ ಒಡಲ, ಫಲಗಳನ್ನು ಸೃಜಿಸುವುದಕೆ?' ಎಂದು ಬ್ರಹ್ಮನನ್ನು ತರಾಟೆಗೆ ತೆಗೆದುಕೊಂಡವರು ಜಾನಕಮ್ಮ. ಆಯ್ಕೆ ಇಲ್ಲದ ಅನಿವಾರ್ಯದ ಬಸಿರಲ್ಲಿ ಹೆತ್ತು ಸತ್ತ ಜಾನಕಮ್ಮನ ಕತೆ ಬಹಳಷ್ಟು ಕನ್ನಡದ ಲೇಖಕಿಯರದ್ದೂ ಆಗಿದೆ. ಜಾನಕಮ್ಮನ ಬದುಕು ಬರಹ ಹೊರಬಿದ್ದ ಹಿಂದೆಯೇ ಕಲ್ಯಾಣಮ್ಮ ಹಾಗೂ ಶ್ಯಾಮಲಾದೇವಿಯನ್ನು ಕುರಿತ ಕೃತಿಗಳನ್ನು ಲೇಖಕಿಯರ ಸಂಘದಿಂದ ಹೊರ ತಂದೆವು. ಕ್ರಮವಾಗಿ ಸುಮಿತ್ರಾಬಾಯಿ ಹಾಗೂ ವಿಜಯಾ ದಬ್ಬೆ ಈ ಕೃತಿಗಳ ಲೇಖಕರು.

ಲೇಖಕಿಯರ ಸಂಘದಾಚೆಗೂ ಮಹಿಳಾ ಪರಂಪರೆಯನ್ನು ಕಟ್ಟಿಕೊಡುವ ಕೆಲಸಗಳು ನಡೆದವು. ತಿರುಮಲಾಂಬಾ ಅವರ ಚರಿತ್ರೆ ಬೆಳಕಿಗೆ ಬಂತು. ಕಳೆದುಹೋದ ಹೆಣ್ಣುಕತೆಗಳು ಯಾವ ಯಾವ ಗೂಡಿನಿಂದಲೋ ಹೊರಬಂದವು. ಮಹಿಳಾ ಪರಂಪರೆಯ ಒಂದೊಂದೇ ಕೊಂಡಿಯನ್ನು ಕೂಡಿಸಿದವು. 1925ರಲ್ಲಿ, ಗೋಕರ್ಣದಂತಹ ಒಂದು ಸಣ್ಣ ಊರಿನಲ್ಲಿ ಜನಿಸಿದ ದೇವಾಂಗನಾ ಶಾಸ್ತ್ರಿ ಅವರ ಕತೆಗಳಲ್ಲಿ ಸೂಕ್ಷ್ಮ ಸ್ತ್ರೀ ಸಂವೇದನೆಯ ಜೊತೆಯಲ್ಲಿಯೇ ದಿಟ್ಟ ಪ್ರತಿಭಟನೆ ಇದೆ.

ಈಗ, ಕಳೆದ ಎರಡು ದಶಕಗಳಲ್ಲಿ ಜಗತ್ತು ಮೇಲ್ನೋಟಕ್ಕೆ ಬದಲಾಗಿದೆ ನಿಜ. ಆದರೆ ಆಳದಲ್ಲಿ ಹೆಚ್ಚಿನ ಬದಲಾವಣೆ ಇಲ್ಲ. ಇಳಿಯುತ್ತಿರುವ ಹೆಣ್ಣುಮಕ್ಕಳ ಸಂಖ್ಯೆಯನ್ನು ನೀವು ಹೇಗೆ ತಾನೇ ವಿವರಿಸುತ್ತೀರಿ? ಒಂದು ವಿಷಯ ಸದಾ ನಮ್ಮ ನೆನಪಲ್ಲಿರಬೇಕು. ಇಂದು ಸಮಾನತೆಯನ್ನು ಸಾಧಿಸಿದ ತಾಣದಲ್ಲಿಯೇ ನಾಳೆ ಮಹಿಳೆ ಎರಡನೇ ದರ್ಜೆಯ ಪ್ರಜೆಯಾಗಿ, ತನ್ನೆಲ್ಲ ಮಾನವಹಕ್ಕುಗಳನ್ನು ಕಳೆದುಕೊಳ್ಳಬಲ್ಲಳು. ಜಗತ್ತು ವಿಪರೀತವಾಗಿ ಪೌರುಷದಿಂದ ಮೆರೆಯುತ್ತಿರುವ ಈ ಹೊತ್ತು, ಯುದ್ಧ – ಕಲಹ – ಹಿಂಸೆ – ಅಪರಾಧಗಳಲ್ಲಿ ಮುಳುಗಿರುವ ಈ ಹೊತ್ತು, ಹೆಣ್ಣಿನ ಸ್ಥಿತಿ ಬಹಳಷ್ಟು ಅಪಾಯದಲ್ಲಿದೆ.

◆ **ದೇಶ ವಿದೇಶಗಳ ಮಹಿಳಾ ವಿಜ್ಞಾನಿಗಳನ್ನು ಕುರಿತ ನಿಮ್ಮ ಬರಹಗಳು, ಹೊಸಗಣ್ಣು ತೆರೆಸುವಂತಹವು. ಗತಿಸಿ ಹೋದ ಮಹಿಳಾ ವಿಜ್ಞಾನಿಗಳ, ವೈಮಾನಿಕರ ಜಾಡು ಹಿಡಿದು, ಅವರ ಬದುಕು – ಕೃತಿಯನ್ನು ಮರು ಕಟ್ಟಿಕೊಟ್ಟಿರುವಂತಹ ಕೆಲಸ ಅಗಾಧವಾದದ್ದು. ಹಾಗೆಯೇ ಹಲವು ಮಹಿಳಾ ವಿಜ್ಞಾನಿಗಳನ್ನು ಸಂದರ್ಶಿಸಿ ಬರೆದಿರುವ ಬರಹಗಳು ನೀಡುವ**